**ದಿನಾಂಕಃ 22.12.2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ** 1 ನೇ ಆರೋಪಿ ಪರ ವಕೀಲರು 3 ನೇ ಆರೋಪಿತರ ಪರ ವಕೀಲರ ಪಾಟೀಸವಾಲು ಆದ ನಂತರ ಮಾಡಲು ವಿನಂತಿಸಿದ ಮೆರೆಗೆ ಅನುಮತಿ ನೀಡಲಾಯಿತು.

**ಪಾಟೀ ಸವಾಲುಃ 3 ನೇ ಆರೋಪಿ ಪರ ವಕೀಲರಾದ ಶ್ರೀ ಹೆಚ್ ಸಿ ಆರ್ ರವರಿಂದಃ**

7. ದೂರು ಸ್ವೀಕರಿಸುವ ಪೂರ್ವದಲ್ಲಿ ನನಗೆ ಆರೋಪಿತರ ವಶದಲ್ಲಿ ಗಾಂಜಾ ಇತ್ತು ಎಂದು ನನಗೆ ಗೊತ್ತಿರಲಿಲ್ಲ. ದೂರಿನಲ್ಲಿ 3 ನೇ ಆರೋಪಿತನ ಹೆಸರು ಇರಲಿಲ್ಲ ಎಂದರೆ ನಿಜ. 3 ನೇ ಆರೋಪಿತನ ಮನೆಗೆ ನಾನು ಹೋಗಿಲ್ಲ ಎಂದರೆ, 2 ನೇ ಆರೋಪಿತನ ತಾಯಿಯ ಮನೆಗೆ ಹೋದಾಗ 2 ಮತ್ತು 3 ನೇ ಆರೋಪಿತರು ಅಲ್ಲಿ ಇದ್ದರು. ಉಳಿದ ಗಾಂಜಾ ಎಲ್ಲಾ 2 ನೇ ಆರೋಪಿತನ ತಾಯಿಯ ಮನೆಯಲ್ಲಿ ಸಿಕ್ಕಿದ್ದರಿಂದ 3 ನೇ ಆರೋಪಿತನ ಮನೆಗೆ ಹೋಗಿಲ್ಲ. 3 ನೇ ಆರೋಪಿತ 2 ನೇ ಆರೋಪಿತನ ತಾಯಿಯ ಮನೆಯ ಖಾಯಂ ವಾಸಿ ಅಲ್ಲ. 3 ನೇ ಆರೋಪಿತನ ಅಂಗಶೋಧನೆ ಮಾಡಿದಾಗ ಆತನ ವಶದಲ್ಲಿ ಯಾವುದೇ ಗಾಂಜಾ ಪೊಟ್ಟಣಗಳು ಅಥವಾ ಅದಕ್ಕೆ ಸಂಬಂಧಿಸಿದಂತೆ ಹಣ ಸಿಕ್ಕಿಲ್ಲ. 1 ನೇ ಆರೋಪಿತನ ಹೇಳಿಕೆಯ ಮೆರೆಗೆ 3 ನೇ ಆರೋಪಿತನನ್ನು ಈ ಕೇಸಿನಲ್ಲಿ ಆರೋಪಿತನಾಗಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಹೇಳುತ್ತಾರೆ 2 ಮತ್ತು 3 ನೇ ಆರೋಪಿತರು ಗಾಂಜಾವನ್ನು ಖರೀದಿಸಿ 1 ನೇ ಆರೋಪಿತನಿಗೆ ಮಾರಾಟ ಮಾಡಿದ್ದನ್ನು ಒಪ್ಪಿಕೊಂಡಿದ್ದರಿಂದ ಆರೋಪಿತನಾಗಿ ಮಾಡಿದ್ದೇನೆ. 2 ಮತ್ತು 3 ನೇ ಆರೋಪಿತರು ಬೇರೆ ಕಡೆಯಿಂದ ಗಾಂಜಾ ಖರೀದಿ ಮಾಡಿ 1 ನೇ ಆರೋಪಿತನಿಗೆ ಮಾರಾಟ ಮಾಡಿದ್ದಾರೆ ಎಂದು ನನ್ನ ತನಿಖಾ ಅವಧಿಯಲ್ಲಿ ಕಂಡು

ಬಂದಿಲ್ಲ ಎಂದರೆ ಸರಿಯಲ್ಲ, ಸದರಿಯವರು ಹೇಳಿಕೆಗಳಲ್ಲಿ ರೂ. 50 ಸಾವಿರ ನೀಡಿ ಗೋವಿಂದ ಮತ್ತು ಜೈನುಲ್ಲಾರವರಿಂದ ಗಾಂಜಾ ಖರೀದಿಸಿ 1 ನೇ ಆರೋಪಿತನಿಗೆ ನೀಡಿದ್ದಾಗಿ ಹೇಳಿದ್ದಾರೆ. ಆರೋಪಿತರು ಸ್ವ ಇಚ್ಛಾ ಹೇಳಿಕೆ ನನ್ನ ಮುಂದೆ ನೀಡಿಲ್ಲ, ಖಾಲಿ ಕಾಗದಕ್ಕೆ ಅವರ ಸಹಿಗಳನ್ನು ಪಡೆದು ನಮಗೆ ಬೇಕಾದಂತೆ ಹೇಳಿಕೆಗಳನ್ನು ತಯಾರಿಸಲಾಗಿದೆ ಎಂದರೆ ಸರಿಯಲ್ಲ. 3 ನೇ ಆರೋಪಿತನಿಗೂ ಈ ಕೇಸಿಗೂ ಯಾವುದೇ ಸಂಬಂಧ ಇಲ್ಲ ಎಂದು ಗೊತ್ತಿದ್ದರೂ ಅವರನ್ನು ಈ ಕೇಸಿನಲ್ಲಿ ಸಿಕ್ಕಿಸಬೇಕೆಂದು ಆರೋಪಿತರ ಮೇಲೆ ಸುಳ್ಳು ಕೇಸ ದಾಖಲಿಸಲಾಗಿದೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 1 ನೇ ಆರೋಪಿ ಪರ ವಕೀಲರಿಂದಃ**

8. 1 ನೇ ಆರೋಪಿತ ಅವಿದ್ಯಾವಂತ ಎಂದರೆ ನನಗೆ ಗೊತ್ತಿಲ್ಲ. 1 ನೇ ಆರೋಪಿತನಿಗೆ ಓದಲು ಬರೆಯಲು ಬರುವುದಿಲ್ಲ ಎಂದರೆ ಸರಿಯಲ್ಲ, ಸ ಇಚ್ಛಾ ಹೇಳಿಕೆಯನ್ನು ಓದಿಯೇ ಸಹಿ ಮಾಡಿದ್ದಾನೆ. 1 ನೇ ಆರೋಪಿತನಿಗೆ ಗೆಜೆಟೆಡ್ ಅಧಿಕಾರಿ ಯಾರು ಎಂದು ಗೊತ್ತಿಲ್ಲ ಎಂದರೆ, ಆತನಿಗೆ ತಿಳಿಸಿ ಹೇಳಿದ್ದೇನೆ. 1 ನೇ ಆರೋಪಿತ ನಾವೇ ಅಂಗಶೋಧನೆ ಮಾಡಬೇಕೆಂದು ಹೇಳಿಲ್ಲ ಎಂದರೆ ಸರಿಯಲ್ಲ, ನಾವೇ ತಿಳಿಸಿ ಹೇಳಿದ್ದೇವೆ. ಎಲೆ ಹೂವು ಕಾಂಡಗಳನ್ನು ಬೇರೆ ಬೇರೆ ಮಾಡಿ ತೂಕ ಮಾಡಿದ್ದೇವೋ ಎಂದರೆ, ಆ ರೀತಿ ಮಾಡಲು ಬರುವುದಿಲ್ಲ ಒಟ್ಟಾಗಿ ತೂಕ ಮಾಡಿದ್ದೇವೆ. ಎ ಎಂಬ ಸೀಲ್ ನ್ನು ಬಳಸಿ ಅಮಾನತ್ತು ಪಡಿಸಿದ ವಸ್ತುಗಳ ಚೀಲಗಳ ಮೇಲೆ ಸಹಿ ಮಾಡಿದ ನಂತರ ಸೀಲಗಳನ್ನು ಮುಂದಿನ ತನಿಖಾಧಿಕಾರಿಗೆ ಹಸ್ತಾಂತರಿಸಿದ್ದೇನೆ. ನಾವು ಮತ್ತು ಪಂಚರು ಅಂಗಶೋಧನೆ ಮಾಡಿಕೊಂಡಿದ್ದೇವೆ. ಯಾರು ಯಾರಿಗೆ ಅಂಗಶೋಧನೆ ಮಾಡಿದ್ದೇವೆ ಎಂಬ ವಿಚಾರವನ್ನು ಮಹಜರನಲ್ಲಿ ನಮೂದು ಮಾಡಲಾಗಿದೆ. ಅಮಾನತ್ತು ಪಡಿಸಿದ ನೋಟುಗಳ ಮೇಲಿದ್ದ ನಂಬರ್ ಬರೆಯಲಾಗಿದೆಯೋ

ಎಂದರೆ ಎಷ್ಟು ಮುಖಬೆಲೆಯ ಎಷ್ಟು ನೋಟುಗಳು ಎಂದು ಬರೆದಿದ್ದೇನೆ. ರಾಜೀವನಗರ ಮನೆ ನಂ.2166 ರ ಅಕ್ಕ ಪಕ್ಕದಲ್ಲಿ ಮನೆಗಳು, ವಾಣಿಜ್ಯ ಕಟ್ಟಡಗಳು ಇರುವ ಕುರಿತು ಮಹಜರನಲ್ಲಿ ನಮೂದು ಮಾಡಿದ್ದೇನೆ. ಪಂಚ ಸಾಕ್ಷಿದಾರರು ನಮ್ಮ ಠಾಣೆಯ ಖಾಯಂ ಸಾಕ್ಷಿದಾರರು ಎಂದರೆ ಸರಿಯಲ್ಲ. ನಾವು ಯಾವುದೇ ಸ್ಥಳಕ್ಕೆ ಹೋಗಿಲ್ಲ, ಆರೋಪಿತನನ್ನು ಬಂಧಿಸಿಲ್ಲ ಎಂದರೆ ಸರಿಯಲ್ಲ. ಅಂಕಿಅಂಶಕ್ಕೋಸ್ಕರ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರ ಯಾವುದೇ ಸ್ವ ಇಚ್ಛಾ ಹೇಳಿಕೆಯನ್ನು ಪಡೆದುಕೊಂಡಿಲ್ಲ, ಅದನ್ನು ಠಾಣೆಯಲ್ಲಿ ಸೃಷ್ಟಿಸಲಾಗಿದೆ ಎಂದರೆ ಸುಳ್ಳು. ಆರೋಪಿತರಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. 1 ನೇ ಆರೋಪಿತರು, 4 ಮತ್ತು 5 ನೇ ಆರೋಪಿತರು ಗಾಂಜಾ ವ್ಯವಹಾರ ಮಾಡುತ್ತಿದ್ದಾರೆ ಎಂಬ ಸುಳಿವನ್ನು ನಮಗೆ ನೀಡಿದ್ದು, 4 ಮತ್ತು 5 ನೇ ಆರೋಪಿತರು ನಿಜವಾಗಿಯೂ ಗಾಂಜಾ ವ್ಯವಹಾರದಲ್ಲಿ ತೊಡಗಿದ್ದು, ಅವರು ನಮಗೆ ಸಿಗದೆ ಇದ್ದುದರಿಂದ 1 ನೇ ಆರೋಪಿತನನ್ನು ಈ ಕೇಸಿನಲ್ಲಿ ಸಿಕ್ಕಿಸಿ ಹಾಕಲಾಗಿದೆ ಎಂದರೆ ಸುಳ್ಳು. 1 ನೇ ಆರೋಪಿತನಿಂದ ಗಾಂಜಾ ಅಥವಾ ಗಾಂಜಾಕ್ಕೆ ಸಂಬಂಧಿಸಿದ ಹಣವನ್ನು ಅಮಾನತ್ತು ಪಡಿಸಿಲ್ಲ, ಅವುಗಳನ್ನು ಸೃಷ್ಟಿ ಮಾಡಲಾಗಿದೆ ಎಂದರೆ ಸುಳ್ಳು.

**ಮರು ವಿಚಾರಣೆಃ** ಇಲ್ಲ

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸ ಇ ಎ ಒ.,

(ಉಷಾ ರಾಣಿ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು.